ಕಥೆಗಾರರು ಕೊಂಚ ಸಂಯಮವನ್ನು ಕಾಪಾಡಿಕೊಂಡರೆ, ಉತ್ತಮ ಕಥೆಗಳನ್ನು ಕನ್ನಡಕ್ಕೆ ನೀಡಬಹುದು. ಏಕೆಂದರೆ ಇವರ ಹಿನ್ನಲೆ ಪ್ರಬುದ್ಧವಾಗಿದೆ. ಸಾಮಾಜಿಕ ವ್ಯವಸ್ಥೆಗೆ ಕನ್ನಡಿ ಹಿಡಿಯಬಲ್ಲ ಶಕ್ತಿ ಇವರಿಗಿದೆ.

## 'ಮುಕ್ತತೆ', ತಲ್ಲಣ ಮತ್ತು ಮಹಾವಲಸೆಗಳ ನಡುವೆ ಹೆಣ್ಣು ಕಥನ

ಹೆಣ್ಣಿನ ಕಥೆಗಳನ್ನು ಬರಿ 'ಕಥೆಗಳು' ಎಂಬ ವ್ಯಂಗ್ಯಧಾಟಿಯನ್ನು ಬಿಟ್ಟು ಗ್ರಹಿಸುವ ಇರಾದೆ ಸದ್ಯಕ್ಕೆ ಹೆಚ್ಚಿದೆ. ಬಹುತೇಕ ಹೆಣ್ಣಿನ ಕಥೆಗಳಲ್ಲಿ ಹಳ್ಳಿಯ ಚಿತ್ರಗಳು ಕೇವಲ 'ನೋಟ'ಗಳಾಗಿ ನುಗ್ಗುತ್ತವೆ. ಅಷ್ಟರ ಮಟ್ಟಿಗೆ ಗ್ರಾಮ ಮತ್ತು ನಗರಗಳ ಕಥೆಗಳು ಬೆರೆತುಹೋಗಿವೆ. ಇವರ ಕಥೆಗಳಲ್ಲಿ ಆಧುನಿಕತೆ ಎಂದರೆ ಹಿಂದಿನ ಶತಮಾನಗಳಲ್ಲಿ ಬರುವ ಸಂಕೇತರೂಪದ ದೃಶ್ಯಗಳೋ ಅಥವಾ ಸಾರಿಗೆ ಉಂಟುಮಾಡುವ ಪಲ್ಲಟಗಳಾಗಿ ಬರಲಾರವು. ಇವರ ಕಥೆಗಳನ್ನು ಓದುತ್ತಿದ್ದಾಗ ವಲಸೆ ಮತ್ತು ಜಾಗತೀಕರಣ ಎಂಬ ಪರಿಕಲ್ಪನೆಗಳು ತಮ್ಮ ಸ್ವರೂಪಗಳನ್ನೇ ಬದಲಿಸಿಕೊಳ್ಳುವ, ಇಲ್ಲವೇ ವ್ಯಾಖ್ಯಾನಗಳೇ ಮರು ರೂಪುಗೊಳ್ಳುವ ದಾರಿಯಲ್ಲಿ ಬರುತ್ತವೆ. ಇಲ್ಲಿ ವಲಸೆ ಮತ್ತು ಜಾಗತೀಕರಣಗಳು ಪರಸ್ಪರ ಒಂದಾಗಬಲ್ಲವು. ಅಂದಹಾಗೆ, ಇವೆರಡೂ ಸಾಹಿತ್ಯಕ್ಕೆ ಹೊರಗಿನ ಪರಿಕಲ್ಪನೆಗಳೇ ಅಲ್ಲವೇ? ಒಂದು ನಿರ್ದಿಷ್ಟ ಜಾಗತೀಕರಣದ ಬೀಜ ವಾಸ್ಕೋಡಿಗಾಮನಿಂದಲೇ ಆರಂಭವಾಗಿದೆ. ಅದರ ಚರಿತ್ರೆ ಸದ್ಯಕ್ಕೆ ಅನಗತ್ಯ. ನನ್ನ ಉದ್ದೇಶವಿಷ್ಟೇ: ಜಾಗತೀಕರಣವನ್ನು ಒಳಗೊಂಡ ಸಾಹಿತ್ಯವನ್ನು ಚರ್ಚಿಸುವಾಗ ಕನಿಷ್ಠ 'ಅಂತರ' ಅಗತ್ಯ. ಸಾಹಿತ್ಯ ಏನಿದ್ದರೂ ಕಲೆಯ ಕೂಸು. ಅದು ನಮ್ಮ ಜೀವನಶೈಲಿಯ ಮೇಲೆ ಉಂಟುಮಾಡಿದ ಪರಿಣಾಮಗಳನ್ನು ಹಿರಿಯರು ಬೇಕಾದಷ್ಟು ವಿವರಿಸಿದ್ದಾರೆ. ಆಧುನಿಕತೆ ಎಂಬುದು ಮನುಷ್ಯನ ಅಭಿವೃದ್ಧಿಯ ವಿಕಾಸ. ಹಾಗಾಗಿಯೇ ಅದನ್ನು ಈಗ ನೋಡಿದರೆ ಅಸಂಖ್ಯ ತಲೆಗಳನ್ನು ಧರಿಸಿದೆ. ಮೇಲುಜಾತಿಗಳಿಗೆ ಜಾಗತೀಕರಣ ಉಂಟುಮಾಡಿದ ಪರಿಣಾಮವು 'ಮಹಾವಲಸೆ'ಯ ಮೂಲಕವೇ ಆಗಿದೆ. ಇದು ಗಡಿ ಮೀರಿದ ಬಗೆ. ಇನ್ನು ಕೆಳಜಾತಿಗಳಿಗೆ ಜಾಗತೀಕರಣ ಕ್ಷಿಪ್ರಗತಿಯ ಅಭಿವೃದ್ಧಿ ಮತ್ತು ಬದುಕಿನಲ್ಲಿ ನಡೆಯುತ್ತಿರುವ ತೀವ್ರ ಪಲ್ಲಟಗಳು ಬೇರೊಂದು ದಿಕ್ಕಿನಲ್ಲಿ ನೋಡುವಂತೆ ಮಾಡಿವೆ. ಈ ಹಾದಿಯಲ್ಲಿ ಕೆಳಜಾತಿಗಳಿಗೆ ಧರ್ಮ ಮತ್ತು ಜಾತಿಗಳು ತಮ್ಮ ವೇಷಗಳನ್ನು ಬದಲಿಸಿಕೊಂಡು ಮತ್ತಷ್ಟು ಕ್ರೌರ್ಯವಾಗಿ ಕಾಣುತ್ತಿವೆ. ಇಷ್ಟು ಹೇಳಲು ಕಾರಣ, ಇವುಗಳ ನಡುವಣ 'ಭಾವುಕಲೋಕ'ವನ್ನು ಕಥಾರೂಪ ಹಿಡಿಯುವ ಸೃಜನಶೀಲ ಸವಾಲುಗಳು ಹೇಗೆ ಕಾಣಿಸುತ್ತಿವೆ ಎಂಬುದಕ್ಕೆ. ಬದಲಾದ ಜೀವನಶೈಲಿಗಳು ಇಂದು ಒಂದು ಚೌಕಟ್ಟಿನಲ್ಲಿ ಬಂದಿಯಾಗಿಲ್ಲ. ಈ ಕ್ರಮವನ್ನು ಆರಂಭದಲ್ಲಿ ಹೇಳಿದ ಹಾಗೆ ಇಪ್ಪತ್ತನೇ ಶತಮಾನದ ಕೊನೆಯಲ್ಲಿ ಬಂದ ಮೊದಲ ಎರಡು ತಲೆಮಾರಿನ ಕೆಲವು ಕಥೆಗಾರರು ಭಿನ್ನವಾಗಿ ಗ್ರಹಿಸಿದ್ದಾರೆ. ಅಲ್ಲಿ ಗ್ರಾಮ ಉಂಟುಮಾಡಿದ ಬಿರುಕುಗಳು ಮತ್ತು ನಗರಗಳು ಸೂಚಿಸುವ ಭಿನ್ನತೆಗಳು ಸೂಕ್ಷ್ಮವಾಗಿವೆ ಮತ್ತು ಸಂಬಂಧಗಳು ಇಲ್ಲಿ ಎಂದಿಗಿಂತ ಅತಿಯಾದ ಬಿರುಕನ್ನು ಕಂಡಿವೆ. ಸದ್ಯಕ್ಕೆ ನಾನೇ ಹಾಕಿಕೊಂಡ ಚೌಕಟ್ಟಿನಲ್ಲಿ ಬರುವ ಹೆಣ್ಣಿನ ಕಥೆಗಳನ್ನು ಬಳಸಿಕೊಂಡು ಅವರ ಸೃಜನಶೀಲ ಸವಾಲುಗಳು ಮತ್ತು ನಿರ್ವಹಿಸುವ ವಸ್ತುವಿನ ಕುರಿತು ಚರ್ಚೆ ಬೆಳಸಬಹುದು. ಇಂದಿನ ಕಥೆಗೆ ವಸ್ತು ಯಾವುದು ಬೇಕಾದರೂ ಆಗಬಹುದು ಎಂಬುದಕ್ಕೆ ಇವರ ಕಥೆಗಳೇ ನಿದರ್ಶನ. 'ಮುಕ್ತತೆ' ಮತ್ತು 'ತಲ್ಲಣ' ಇವರನ್ನು ಆವರಿಸಿರುವ ದೊಡ್ಡ ವಸ್ತುಗಳು ಅಥವ ಆಶಯಗಳು. ಇವೆರಡೂ ಅವರ ಬದುಕನ್ನು ಅಲ್ಲಾಡಿಸಿವೆ. ಎಷ್ಟೇ ಆಧುನಿಕ ಪರಿಕಲ್ಪನೆಗಳು ನಮ್ಮ ಮುಂದೆ ಬಂದರೂ ಸದ್ಯಕ್ಕೆ ಹೆಣ್ಣಿನ ವರ್ತಮಾನವನ್ನು ಗಹನವಾಗಿ ನೋಡುವಂತೆ ಮೇಲಿನ ಎರಡೂ ವಿಚಾರಗಳು ಒತ್ತಾಯಿಸುತ್ತವೆ. ಒಂದು ಕಡೆ ನನಗೆ ಮುಕ್ತತೆ ಸಿಕ್ಕಿದೆ ಎನ್ನುವಾಗಲೇ ಮತ್ತೊಂದು ಕಡೆ ತಲ್ಲಣ ಬೆನ್ನಹಿಂದೆ ನುಗ್ಗುತ್ತದೆ. ಹೊಸ ತಲೆಮಾರು ತಮ್ಮ ಕಥೆಗಳಲ್ಲಿ ಸ್ವಜನಶೀಲತೆಯ ಬಿಕ್ಕಟ್ಟುಗಳ ನಡುವೆ ಇದನ್ನು ಸಾಧಿಸುವ ಪ್ರಯತ್ನವನ್ನು ನಡೆಸಿದ್ದಾರೆ.

'ಮಹಾವಲಸೆ'ಯ ಆಯಾಮದಲ್ಲಿ ಕಾವ್ಯಾ ಕಡಮೆ ಮತ್ತು ಸಂಜೋತ ಪುರೋಹಿತ ಮುಂತಾದವರ ಕಥೆಗಳನ್ನು ಗ್ರಹಿಸಬಹುದು. ಇಪ್ಪತ್ತೊಂದನೇ ಶತಮಾನದಲ್ಲಿ ಬರೆಯುತ್ತಿರುವ ಇವರು, ಆಧುನಿಕತೆಯು ಒಡ್ಡುತ್ತಿರುವ ಅತಿಯಾದ ಬದಲಾವಣೆಗಳನ್ನು ಅನಾವರಣ ಮಾಡಬಲ್ಲರು. ವಿದೇಶದ ಬದುಕು ಭಾರತೀಯ ಮನಸ್ಸುಗಳನ್ನು ಎಷ್ಟರಮಟ್ಟಿಗೆ ಕುತೂಹಲಕ್ಕೆ ಮತ್ತು ಕೊಂಚ ಮಟ್ಟಿಗೆ ಬಿಡುಗಡೆಗೆ ದಾರಿಮಾಡಿಕೊಟ್ಟಿತೋ, ಅಷ್ಟೇ ಒಂಟಿತನವನ್ನು ದಯಪಾಲಿಸಿದೆ. ಮಹಾವಲಸೆಯ ಪರಿಣಾಮಗಳಿವು. ಇದರಲ್ಲಿ ಬಹುಮಟ್ಟಿಗೆ ಮೇಲುಜಾತಿಗಳೇ ಅಧಿಕವಾಗಿವೆ. ಅಸ್ತಿತ್ವವನ್ನು ಹುಡುಕುವ ಮತ್ತು ಬದುಕಿನ ನಿಲ್ದಾಣಗಳನ್ನು ತಲುಪುವ ಹಾದಿಯಲ್ಲಿ ಭಾವುಕತೆಯೇ ಇಲ್ಲಿ ಕಾಣೆಯಾದಂತೆ ಅಥವಾ